## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17/04/2008 ರ ನಡವಳಿಗಳು

**ವಿಷಯದ ಸಂಖ್ಯೆ:51/2008-09**

ಕೃಷ್ಣರಾಜಪುರ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ರಾಮಮೂರ್ತಿನಗರದಿಂದ ನಗರ ಕೆರೆ (ಐಟಿಐ) ಕಾಂಪೌಂಡ್‌ವರೆಗೆ ಬೃಹತ್ ನೀರು ಚರಂಡಿಯಲ್ಲಿ ಮಣ್ಣಿನ ಕೆಲಸ, ಕಲ್ಲು ಕಟ್ಟಡದ ಗೋಡೆಗಳು ಮತ್ತು ಆರ್.ಸಿ.ಸಿ. ತಡೆಗಳು ಹಾಗೂ ಸೇತುವೆಗಳ (ಕಲ್ವರ್ಟ್) ನಿರ್ಮಾಣ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಮುಖ್ಯ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು (ನಗರಾಭಿವೃದ್ಧಿ ಇಲಾಖೆ), ಕರ್ನಾಟಕ ರಾಜ್ಯ ಸರ್ಕಾರ ಇವರುಗಳ ಸಮ್ಮುಖದಲ್ಲಿ ಬೆಂಗಳೂರು ನಗರದ ಸುತ್ತ ಮುತ್ತ ಇರುವ ಪೌರ ಸಭೆಗಳ ಮತ್ತು ನಗರ ಸಭೆಗಳ ವ್ಯಾಪ್ತಿಯಲ್ಲಿ ಬರುವ ಹಲವಾರು ಪ್ರದೇಶಗಳು 2005ನೇ ಸಾಲಿನ ಮಳೆಗಾಲದಲ್ಲಿ ಮಳೆ ನೀರಿನ ಕಾಲುವೆಗಳ ವ್ಯವಸ್ಥೆ ಇಲ್ಲದಿದ್ದರಿಂದ ವ್ಯಾಪಕವಾಗಿ ಪ್ರವಾಹದಿಂದ ಆಸ್ತಿ ಪಾಸ್ತಿಗಳು ನಷ್ಟವಾಗಿ ಅಲ್ಲಿ ವಾಸಿಸುವ ಜನಗಳು ಅತೀವ ಸಂಕಷ್ಟದಲ್ಲಿ ಸಿಲಿಕಿದ್ದು, ಈ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರವು ಮುಂಬರುವ ಮಳೆಗಾಲದಲ್ಲಿ ಈ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ಯಾವ ರೀತಿಯ ತೊಂದರೆಗಳ ಪ್ರವಾಹದಿಂದ ಸೃಷ್ಟಿಯಾಗದಂತೆ ತ್ವರಿತವಾಗಿ ಇದಕ್ಕೆ ಅನುಕೂಲವಾಗುವ ಎಲ್ಲಾ ಮಳೆ ನೀರು ಚರಂಡಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಮುಂದಿನ ಮಳೆಗಾಲ ಪ್ರಾರಂಭವಾಗುವ ಮೊದಲೇ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೈಗೆತ್ತಿಕೊಂಡು ಯಶಸ್ವಿಯಾಗಿ ತ್ವರಿತಗತಿಯಲ್ಲಿ ಮುಗಿಸಬೇಕೆಂದು ಹಲವಾರು ಸಭೆಯಲ್ಲಿ ಆದೇಶವಾಗಿರುತ್ತದೆ.

ಮೇಲೆ ಹೇಳಿರುವ ಕಾರಣಗಳಿಂದ ಕೃಷ್ಣರಾಜಪುರ ನಗರ ಸಭೆ ವ್ಯಾಪ್ತಿಯಲ್ಲಿ ಬರುವ ರಾಮಮೂರ್ತಿನಗರದಿಂದ ನಗರ ಕೆರೆ (ಐಟಿಐ) ಕಾಂಪೌಂಡ್‌ವರೆಗೆ ಬೃಹತ್ ನೀರು ಚರಂಡಿಯಲ್ಲಿ ಮಣ್ಣಿನ ಕೆಲಸ, ಕಲ್ಲು ಕಟ್ಟಡದ ಗೋಡೆಗಳು ಮತ್ತು ಆರ್.ಸಿ.ಸಿ. ತಡೆಗಳು ಹಾಗೂ ಸೇತುವೆಗಳ (ಕಲ್ವರ್ಟ್) ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.103.00 ಲಕ್ಷಗಳಿಗೆ 2005-06ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರ ಪಟ್ಟಿಯಂತೆ ತಯಾರಿಸಿದ್ದು, ಸದರಿ ಕಾಮಗಾರಿಗೆ ಮುಖ್ಯ ಅಭಿಯಂತರರು (ಯೋಜನೆ) ರವರು ತಾಂತ್ರಿಕ ಅನುಮೋದನೆಯನ್ನು ನೀಡಿದ್ದು, ಕಾಮಗಾರಿಗೆ ಕಾಮಗಾರಿ ಸಂಕೇತ ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಅತಿ ಜರೂರಾಗಿ ಕೈಗೊಳ್ಳಬೇಕಾಗಿದ್ದರಿಂದ ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ:ಅ.ಅ(ಯೋ)ಪಿಆರ್13/06-07, ದಿನಾಂಕ:03/04/2006 ರಂದು ಅಧೀಕ್ಷಕ ಅಭಿಯಂತರರು (ಯೋಜನೆ) ರವರು ಹೊರಡಿಸಿರುತ್ತಾರೆ ಮತ್ತು ಸದರಿ ವಿಷಯವು ರಾಜ್ಯ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟವಾಗಿರುತ್ತದೆ.

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಎರಡು ಜನ ಗುತ್ತಿಗೆದಾರರು ಟೆಂಡರ್ ಫಾರಂಗಳನ್ನು ಪಡೆದು ನಂತರ ಈ ಕೆಳಕಂಡ ಇಬ್ಬರು ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು, ಸದರಿ ಟೆಂಡರ್‌ನಲ್ಲಿ ಅವರುಗಳು ನಮೂದಿಸಿದ ಟೆಂಡರ್ ಪ್ರೀಮಿಯಂ ಮೊತ್ತದ ವಿವರಗಳು ಈ ಕೆಳಕಂಡಂತಿರುತ್ತದೆ.

. . . . 2

| ಕ್ರ.ಸಂ | ಗುತ್ತಿಗೆದಾರರ ಹೆಸರು | ಮೂಲ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಗುತ್ತಿಗೆದಾರರು ನಮೂದಿಸಿದ ಮೊತ್ತ (ರೂ.ಲಕ್ಷಗಳಲ್ಲಿ) | ಮೂಲ ಅಂದಾಜಿಗಿಂತ ಶೇ.ಹೆಚ್ಚುವರಿ |
|---|---|---|---|---|
| 1 | ಶ್ರೀ ವಿ. ಶ್ರೀಧರ ಚೌಧರಿ | 103.00 | 177.619 | 73.26% |
| 2 | ಶ್ರೀ ಆರ್. ಸೂರಿ | 103.00 | 187.912 | 83.30% |

ಶ್ರೀ ವಿ. ಶ್ರೀಧರ ಚೌಧರಿ ರವರು ಕಡಿಮೆ ಮೊತ್ತವನ್ನು ನಮೂದಿಸಿದ್ದು, ಸದರಿಯವರು ನಮೂದಿಸಿರುವ ಮೊತ್ತವು 2005–06ನೇ ಸಾಲಿನ ಅಂದಾಜು ಮೊತ್ತದ ಮೇಲೆ ಶೇಕಡ 73.26% ಇದ್ದು, 2006–07ನೇ ಸಾಲಿನಲ್ಲಿ ಎಸ್.ಆರ್.ದರ ಇನ್ನು ಬಿಡುಗಡೆಯಾಗದೇ ಇದ್ದುದರಿಂದ ಅಂದಿನ ಮುಖ್ಯ ಅಭಿಯಂತರರು (ಯೋಜನೆ) ಗುತ್ತಿಗೆದಾರರು ನಮೂದಿಸಿದ ದರವನ್ನು ಮಾರುಕಟ್ಟೆ ದರಕ್ಕೆ ಹೋಲಿಸಿ, ಈ ಗುತ್ತಿಗೆ ದರವು ಶೇಕಡ 25.18% ರಷ್ಟು ಹೆಚ್ಚಾಗುವುದೆಂದು ತಿಳಿಸಿ, ಮಾನ್ಯ ಆಯುಕ್ತರಿಂದ ಅನುಮೋದನೆಯನ್ನು ಪಡೆದು, ದಿನಾಂಕ:01/06/2006 ರಲ್ಲಿ ಕಾಮಗಾರಿಯ ಟೆಂಡರ್ ಮೊತ್ತವಾದ ರೂ.1,63,17,731–00 ಗಳಿಗೆ ಕಾರ್ಯಾದೇಶವನ್ನು ಶ್ರೀ ವಿ. ಶ್ರೀಧರ ಚೌಧರಿ ರವರಿಗೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗೆ ಅಂದಾಜು ಪಟ್ಟಿ ಮತ್ತು ಟೆಂಡರ್ ಅನುಮೋದನೆ ಕೋರಿ ಸರ್ಕಾರ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರಿಗೆ ದಿನಾಂಕ:11/12/2007 ರಂದು ಪತ್ರ ಬರೆಯಲಾಗಿತ್ತು. ಆದರ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ:ನಅಇ/722/ಎಂ.ಎನ್.ವೈ/2007, ದಿನಾಂಕ:29/12/2007 ರಂದು ಪತ್ರ ಬರೆದು ಸದರಿ ಅಂದಾಜು ಪಟ್ಟಿಗೆ ಅನುಮೋದನೆ ನೀಡಿ, ಟೆಂಡರ್ ಅನುಮೋದನೆಯು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ತಿದ್ದುಪಡಿ ನಿಯಮ–06 ಮತ್ತು 6(ಎ) ಯ ಪ್ರಕಾರ ಪಾಲಿಕೆಗೆ ಅಧಿಕಾರವಿರುವುದರಿಂದ, ಸದರಿ ಕಾಮಗಾರಿಯ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10/04/2008 ರ ಟಿಪ್ಪಣಿ.

ನಿರ್ಣಯ: ಆಯುಕ್ತರವರ ದಿನಾಂಕ:10/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು